# ವಾರ್ಡ್ ಸಭೆ ಸಂಖ್ಯೆ.23

ದಿನಾಂಕ:04.12.2021 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

01.ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. **(ಕಾರ್ಯದರ್ಶಿ)**
02.ಶ್ರೀ ಜಯಪಾಲ್ ಸದಸ್ಯರು.
03.ಶ್ರೀಮತಿ ಪ್ರೇಮ ಸದಸ್ಯರು.
04.ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
05.ಶ್ರೀ ನಂಜೇಗೌಡ ಸದಸ್ಯರು.
06.ಶ್ರೀ ವೈ.ಆರ್.ವೆಂಕಟೇಶ್ ಸದಸ್ಯರು.
07.ಎಂ.ಮಹದೇವ ನಿಕಟಪೂರ್ವ ಬಿ.ಬಿ.ಎಂ.ಪಿ ಸದಸ್ಯರು,
08.ಶ್ರೀಮತಿ ರಶ್ಮಿ ಸಹಾಯಕ ಕಾಯಪಾಲಕ ಅಬಿಯಂತರರು ಘನ ತ್ಯಾಜ್ಯ
09.ಶ್ರೀ ಛಾಯಾಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
10.ಶ್ರೀ ವಿಠಲ್ ಮೀಟರ್ ರೀಡರ್ (ಬಿ.ಡಬ್ಲ್ಯೂ.ಎಸ್.ಎಸ್.ಬಿ) ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
11.ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
12ಶ್ರೀ ಗುತ್ತಿಗೆದಾರರ ಪರವಾಗಿ ದೇವರಾಜ್ (ಬಿಬಿಎಂಪಿ ಬೀದಿ ದೀಪ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
13.ಶ್ರೀ ನಿಂಗರಾಜು ಎನ್ ಕಂದಾಯ ಪರಿವೀಕ್ಷಕರು ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
14. ಮಹಾಲಕ್ಷ್ಮೀಲೇಔಟ್ ಪೋಲೀಸ್ ಠಾಣೆಯ ಅಧಿಕಾರಿಗಳು.
15.ಶ್ರೀ ಕೃಷ್ಣ ಮಾರ್ಷಲ್ ಮೇಲ್ವಿಚಾರಕರು
16.ಶ್ರೀ ದಿಲೀಪ್ ಮಾರ್ಷಲ್ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
18.ಶ್ರೀ ಲೋಕೇಶ್ ಪಶು ಸಂಗೋಪಾನ ಪರಿವೀಕ್ಷಕರು,
17.ಶ್ರೀ ಮಲ್ಲಯ್ಯ ವಲಯ ಅರಣ್ಯಾ ಸಂರಕ್ಷಣಾಧಿಕಾರಿಗಳ ಪರ

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 01 | ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 02 | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 03 | ಸದಸ್ಯರು ವ್ಯಾಕ್ಸಿನ್ ಬಗ್ಗೆ ಮಾಹಿತಿ ಕೋರಿದರು, ಇದಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಂಕರನಗರಕ್ಕೆ ಸಂಬಂಧಿಸಿದವರು ಸಭೆಗೆ ಹಾಜರಾಗಿ ಸಾರ್ವನಿಕರಿಗೆ ವ್ಯಾಕ್ಸಿನ್ ಪ್ರತಿದಿನ 250 ರಿಂದ 300 ಜನಕ್ಕೆ ನೀಡಲಾಗುತ್ತಿರುತ್ತದೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ 4 ಪಾಸಿಟೀವ್ + ಕೇಸ್ ಗಳ ಬಂದಿರುತ್ತವೆ ಎಂದು ತಿಳಿಸಿರುತ್ತಾರೆ. | – |
| 04 | ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತ್ತೆ ವಾರ್ಡ್ ವ್ಯಾಪ್ತಿಯಲ್ಲಿ ಸುಮಾರು 12 ಬ್ಲಾಕ್ ಸ್ಪಾಟ್‌ಗಳು ಇದ್ದು ಸದರಿ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸುವುದರ ಬಗ್ಗೆ ಸಹಾಯಕ ಕಾರ್ಯಪಾಲಕರ ಅಭಿಯಂತರರು ಘನ ತ್ಯಾಜ್ಯ ಹಾಗೂ ಮಾರ್ಷಲ್ ಮೇಲ್ವಿಚಾರಕರೊಂದಿಗೆ ಸಮನ್ವಯ ಸಾಧಿಸಿಕೊಂಡು ಬ್ಲಾಕ್ ಸ್ಪಾಟ್ ತೆರವುಗೊಳಿಸಲು ಯೋಜನೆ ರೂಪಿಸಿ ಮುಂದಿನ ಸಭೆಗೆ ತಿಳಸಲು ತಿರ್ಮಾನಿಸಲಾಯಿತ್ತು | ಸ.ಕಾ.ಅ. ಮತ್ತು ಮಾರ್ಷಲ್ ಮೇಲ್ವಿಚಾರಕರು |

| | | |
|---|---|---|
| 05 | ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ವಿಲೇವಾರಿ ಮಾಡದೆ ಹಾಗೆಯೇ ಉಳಿಸಿಕೊಂಡು ರಾತ್ರಿ ವೇಳೆಯಲ್ಲಿ ಮಾರುಕಟ್ಟೆಯಿಂದ ಹೊರಗಡೆ ಸಾರ್ವಜನಿಕ ಜಾಗಗಳಲ್ಲಿ ಸುರಿಯುತ್ತಿರುತ್ತಾರೆಂದು ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿರುತ್ತಾರೆ ಇದರ ಬಗ್ಗೆ ಕೃಷಿ ಉತ್ಪನ್ನ ಮಾರುಕಟ್ಟೆಯ ಕಾರ್ಯಧರ್ಶಿಗಳಿಗೆ ಪತ್ರ ಬರೆಯುವುದಾಗಿ ಸಭೆಗೆ ತಿಳಿಸಲಾಯಿತು, | ಕಾರ್ಯಧರ್ಶಿಗಳು ಎ.ಪಿ.ಎಂ.ಸಿ ಯಶವಂತಪುರ |
| 06 | ಪುಡ್ ಗೋಡನ್ ಬಳಿ ಘನ್ಯತ್ಯಾಜ್ಯ ಸಾಗಿಸುವ ವಾಹನಗಳು ನಿಲ್ಲಿಸಿ ಲಿಚ್ಚಡ್ ಸೋರಿಕೆಯಾಗಿ ರಸ್ತೆಗಳು ದುರ್ವಾಸನೆಯಿಂದ ಕೂಡಿ ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆಯಾಗಿರುತ್ತದೆಂದು ಸದಸ್ಯರಾದ ವೈ.ಆರ್. ವೆಂಕಟೇಶ್ ಸಭೆಗೆ ತಿಳಿಸಿ ಸದರಿ ವಾಹನಗಳನ್ನು ಅಲ್ಲಿಂದ ತೆರವುಗೊಳಿಸಬೇಕೆಂದು ಸಭೆಗೆ ಕೋರಿರುತ್ತಾರೆ. | ಯಶವಂತಪುರ ಸಂಚಾರಿ ಪೋಲೀಸ್ ಠಾಣೆ |
| 07 | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿದ ದೂರುಗಳು ಹೆಚ್ಚಾಗಿ ಇರುವುದರಿಂದ ಪ್ರತಿ ಸಭೆಗೆ ಜವಾಬ್ದಾರಿಯುತ ಅಧಿಕಾರಿಗಳು ಹಾಜರಾಗಬೇಕೆಂದು ಸಭೆಯಲ್ಲಿ ಸಾರ್ವಸದಸ್ಯರು ಮತ್ತು ಸಾರ್ವಜನಿಕರು ಸಭೆಗೆ ವಿನಂತಿಸಿಕೊಂಡಿರುತ್ತಾರೆ, | ಸಹಾಯಕ ಕಾರ್ಯಪಾಲಕ ಅಭಿಯಂತರು ಬಿ.ಡಬ್ಲ್ಯೂ.ಎಸ್. ಎಸ್.ಬಿ |
| 08 | ಶ್ರೀ ಕಾರ್ಯದರ್ಶಿಗಳು ಐ–ಮಾಸ್ಟ್ ದುರಸ್ಥಿ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಶ್ರೀ ಜಮಿಲ್ ಸಹಾಯಕ ಅಭಿಯಂಯತರರು (ಬಿಬಿಎಂಪಿ ಬೀದಿ ದೀಪ) ರವರು ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು 16 ಐ–ಮಾಸ್ಟ್‌ಗಳು ಅಳವಡಿಸಲಾಗಿರುತ್ತದೆ ದಿನಾಂಕ:24.11.2021 ರಂದು ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಳ್ಳುತ್ತದೆ, ನಂತರ 15 ದಿನಗಳೊಳಗೆ ಎಲ್ಲಾ ಐ–ಮಾಸ್ಟ್‌ಗಳನ್ನು ರಿಪೇರಿ ಮಾಡಿಸುತ್ತೇವೆ ಎಂದು ಸಭೆಗೆ ತಿಳಿಸಿದರು ಆದರೆ ಇವರೆಗೂ ಯಾವುದೇ ಪ್ರಗತಿ ಕಾಣದೇ ಇರುವುದರಿಂದ ಸಭೆಯಲ್ಲಿ ಸರ್ವಸದಸ್ಯರು ಕಾರ್ಯಪಾಲಕ ಅಭಿಯಂತರರು ಬೀದಿ ದೀಪ ನಿರ್ವಹಣೆ ರವರಿಗೆ ಇದರ ಬಗ್ಗೆ ಕ್ರಮ ಕೈಗೊಂಡು, ಮುಂದಿನ ಸಭೆಗೆ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ನೀಡಲು ತಿಳಿಸಿದೆ. | ಕಾರ್ಯಪಾಲಕ ಅಭಿಯಂತರರು ಬೀದಿ ದೀಪಗಳ ನಿರ್ವಹಣೆ |
| 09 | ಆರ್.ಎಂ.ಸಿ ಯಾರ್ಡ್ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಿ.ಸಿ.ಕ್ಯಾಮರ ಅಳವಡಿಸಿಲು ಪ್ರಸ್ತಾಪನೆ ವಿವರ ಸಲ್ಲಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಮಹಾಲಕ್ಷ್ಮೀಪುರ ಉಪ ವಿಭಾಗದಿಂದ ಪತ್ರ ಬರೆಯಲಾಗಿರುತ್ತದೆ ಹಾಗೂ ಸಾರ್ವಜನಿಕರಿಂದ ವಾರ್ಡ್ ಸಭೆಗೆ ತಮ್ಮ ಇಲಾಖೆಗೆ ಸಂಬಂಧಿಸದ ಹಲವು ದೂರುಗಳು ಬಂದಿರುತ್ತವೆ ಇದರ ಬಗ್ಗೆ ವಾರ್ಡ್ ಸಭೆಗೆ ಹಾಜರಾಗಲು ಹಲವು ಬಾರಿ ದೂರವಾಣಿ ಮುಖಾಂತರ ತಮ್ಮ ಠಾಣೆಗೆ ತಿಳಿಸಲಾಗಿರುತ್ತದೆ. ಇದರ ಬಗ್ಗೆ ವಾರ್ಡ್ ಸಭೆಯಲ್ಲಿ ಸರ್ವ ಸದಸ್ಯರು ಮುಂದಿನ ಸಭೆಗೆ ತಮ್ಮ ಠಾಣಾ ವತಿಯಿಂದ ಜವಬ್ದಾರಿಯುತ ಸಿಬ್ಬಂದಿಯು ಹಾಜರಾಗಲು ಸಭೆಗೆ ವಿನಂತಿಸಿರುತ್ತಾರೆ | ಠಾಣಾಧಿಕಾರಿಗಳು ಆರ್.ಎಂ.ಸಿ ಯಾರ್ಡ್ |
| 10 | ನಂದಿನಿಲೇಔಟ್ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಿ.ಸಿ.ಕ್ಯಾಮರ ಅಳವಡಿಸಿಲು ಪ್ರಸ್ತಾಪನೆ ವಿವರ ಸಲ್ಲಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಮಹಾಲಕ್ಷ್ಮೀಪುರ ಉಪ ವಿಭಾಗದಿಂದ ಪತ್ರ ಬರೆಯಲಾಗಿರುತ್ತದೆ ಹಾಗೂ ಸಾರ್ವಜನಿಕರಿಂದ ವಾರ್ಡ್ ಸಭೆಗೆ ತಮ್ಮ ಇಲಾಖೆಗೆ ಸಂಬಂಧಿಸದ ಹಲವು ದೂರುಗಳು ಬಂದಿರುತ್ತವೆ ಇದರ ಬಗ್ಗೆ ವಾರ್ಡ್ ಸಭೆಗೆ ಹಾಜರಾಗಲು ಹಲವು ಬಾರಿ ದೂರವಾಣಿ ಮುಖಾಂತರ ತಮ್ಮ ಠಾಣೆಗೆ ತಿಳಿಸಲಾಗಿರುತ್ತದೆ. ಇದರ ಬಗ್ಗೆ ವಾರ್ಡ್ ಸಭೆಯಲ್ಲಿ ಸರ್ವ ಸದಸ್ಯರು ಮುಂದಿನ ಸಭೆಗೆ ತಮ್ಮ ಠಾಣಾ ವತಿಯಿಂದ ಜವಬ್ದಾರಿಯುತ ಸಿಬ್ಬಂದಿಯು ಹಾಜರಾಗಲು ಸಭೆಗೆ ವಿನಂತಿಸಿರುತ್ತಾರೆ | ಠಾಣಾಧಿಕಾರಿಗಳು ನಂದಿನಿಲೇಔಟ್ |

ಕಾರ್ಯದರ್ಶಿಗಳು

6/12/21

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44